ಕಳಚಿ ನನಗೆ ತೊಡಿಸುತ್ತಾರೆ. ನನಗೆ ನಗು ಬಂತು.

'ಏನಾಯ್ತು?' ಋಷಭರು ಕೇಳಿದರು.

'ಏನಿಲ್ಲ, ನಾನೂ ಅವರಿಬ್ಬರಂತೆ ಬಟ್ಟೆಗಳನ್ನು ಧರಿಸಿ ಅಡ್ಡಾಡಲು ಹೋದರೆ ಎಂದು ಯೋಚಿಸುತ್ತಿದ್ದೇನೆ' ನಾನು ನಕ್ಕೆ.

'ಖಂಡಿತ, ಅಡ್ಡಾಡಬಲ್ಲಿರಿ, ಆದ್ರೆ ರಸ್ತೆಯಲ್ಲಲ್ಲ, ಕೋಣೆಯೊಳಗೆ, ಅದೂ ನನ್ನೆದುರು' ಋಷಭರು ಮುಗುಳ್ನಕ್ಕರು.

'ಅದೆಲ್ಲಾ ಸರಿಯೇ, ಆದ್ರೆ ನಾವು ನಮ್ಮ ಹೊಟೇಲ್‌ನ ಅಡ್ರೆಸ್ ಅನ್ನು ಕೇಳೋಣ' ನಾನು ಸಲಹೆಯಿತ್ತೆ.

ಮಾರ್ಗ ವಿಚಾರಿಸಿ, ಹೊಟೇಲ್‌ಗೆ ಬಂದೆವು. ಅದೊಂದು ಸಾಧಾರಣ ಹೊಟೇಲ್ ಆಗಿದ್ದು ಅದರ ಹೆಸರು ಅವಶ್ಯವಾಗಿ ಫ್ರೆಂಚ್‌ಗೆ ಸಂಬಂಧಿಸಿತ್ತು. ದಿನಕ್ಕೆ ಎರಡೂವರೆ ಸಾವಿರ ಬಾಡಿಗೆ. ಅದೇ ಬೇರೆ ನಗರಗಳಲ್ಲಾಗಿದ್ದರೆ ಒಂದು ಸಾವಿರಕ್ಕಿಂತ ಹೆಚ್ಚು ಇರುತ್ತಿರಲಿಲ್ಲ. ಆದರೆ ಅದು ವಿಶ್ವಪ್ರಸಿದ್ಧ ಪ್ರವಾಸಿ ಕೇಂದ್ರ ಖಜುರಾಹೋ ಆಗಿತ್ತು. ಡಾ. ಋಷಭ್ ಜೈನ್ ಪ್ರೊಫೆಸರ್ ಸಾಹೇಬರು ನಮ್ಮ ಅಗಲುವಿಕೆಯನ್ನು 'ಸೆಲಬ್ರೇಟ್' ಮಾಡಲು ಹೊರಟಿದ್ದರು; ಇಲ್ಲದಿದ್ದಲ್ಲಿ ಅವರು ಎರಡು ದಿನಗಳಿಗಾಗಿ ಐದು ಸಾವಿರ ರೂಪಾಯಿಗಳನ್ನು ಖರ್ಚು ಮಾಡುವ ವ್ಯಕ್ತಿಯಾಗಿರಲಿಲ್ಲ. ನನಗೆ ಋಷಭರು ಈ ಮಾತನ್ನು ಸಹ ಹೇಳಿದ್ದರು. ಕಂಜೂಸ್ ಋಷಭರು ಇಷ್ಟು ಖರ್ಚು ಮಾಡುತ್ತಿದ್ದಾರಲ್ಲ ಎಂದು ನಾನು ಖುಷಿಪಡುತ್ತಿದ್ದೆ. ನಾವು ಹೊಟೇಲ್‌ನಲ್ಲಿ ಕೈ ಕಾಲು ಮುಖ ತೊಳೆದುಕೊಂಡು ಹೊರಗೆ ಬಂದೆವು. ಮರಳಿ ಮಂದಿರಗಳ ಸಮೀಪಕ್ಕೆ ಬಂದು ಕಾರನ್ನು ಪಾರ್ಕ್ ಮಾಡಿ ಅಲ್ಲಿಯೇ ಇದ್ದ ರೆಸ್ಟೋರೆಂಟಿನಲ್ಲಿ ತಿಂಡಿ ತಿಂದೆವು. ನಂತರ ಬಂದು ಟಿಕೆಟ್ ಕಿಟಕಿಯ ಬಳಿ ನಿಂತೆವು. 'ಆಫ್ ಸೀಜನ್' ಆಗಿದ್ದರಿಂದ ಗುಂಪು ಹೆಚ್ಚಿರಲಿಲ್ಲ. ಟಿಕೆಟ್ ಪಡೆದು ಮಂದಿರದ ಪ್ರವೇಶ ದ್ವಾರಕ್ಕೆ ಬಂದಾಗ ನಮ್ಮನ್ನು ಮೆಟಲ್ ಡಿಟೆಕ್ಟರ್‌ನಲ್ಲಿ ಪರೀಕ್ಷಿಸಲಾಯಿತು. ನಂತರ ನಮ್ಮ ಬಟ್ಟೆಗಳು ಮತ್ತು ಜೇಬುಗಳನ್ನು ಸಹ ತಡವರಿಸಿ ಪರೀಕ್ಷಿಸಿದರು. ಈ ಅದ್ವಿತೀಯ ಕಲಾತೀರ್ಥದ ಸುರಕ್ಷತೆಗೆ ಇದೆಲ್ಲಾ ತುಂಬಾ ಅವಶ್ಯಕವಾಗಿತ್ತು. ಮಂದಿರ ಮತ್ತು ಆ ಮಂದಿರಗಳಲ್ಲಿ ಕೆತ್ತಲಾದ ವಿಗ್ರಹಗಳನ್ನು ನೋಡಿ ನನಗೆ ಅತ್ಯಂತ ಆಶ್ಚರ್ಯವಾಯಿತು. ನನ್ನ ಕಣ್ಣುಗಳೆದುರು ಕಲೆಯ ಅನುಪಮ ಸೌಂದರ್ಯವಿತ್ತು. ನಾನು ಆ ವಿಗ್ರಹಗಳನ್ನು ಮನಸಾರೆ ನೋಡಿದೆ, ಆದರೂ ಮನಸ್ಸು ತುಂಬಲಿಲ್ಲ. ಮಂದಿರದ ಗೋಡೆಗಳಲ್ಲಿ ಒಂದೂ ವಿಗ್ರಹವಿಲ್ಲದ ಕಲ್ಲಿರಲಿಲ್ಲ. ಅಪ್ಸರೆಯರು, ದೇವಿದೇವತೆಗಳು ಎಲ್ಲದರಲ್ಲಿ ಕಲೆಯ ಅದ್ಭುತ ನೋಟವಿತ್ತು.

ನಾನು ವಿಗ್ರಹಗಳಲ್ಲಿ ಕಲೆಯ ಕೌಶಲವನ್ನು ಗಮನಿಸುತ್ತಿದ್ದೆ, ಆದರೆ ಋಷಭರು ಅದೇ ವಿಗ್ರಹಗಳಲ್ಲಿ ಕಾಮ ಕಲೆಗಳನ್ನು ನೋಡುತ್ತಿದ್ದರು. ನಾನೂ ನೋಡುತ್ತಿದ್ದೆ, ಆದರೆ ನಾನು ಕಲಾಕಾರರು ಇವುಗಳನ್ನು ಹೇಗೆ ಮಾಡಿರಬಹುದು ಎಂದು ಯೋಚಿಸುತ್ತಾ ನೋಡುತ್ತಿದ್ದೆ. ಇವುಗಳನ್ನು ರಚಿಸುವಾಗ ಅವರು ಕಾಮಾತುರರಾಗಿರಲಿಲ್ಲವೇ? ಆದರೆ ಕಾಮಾತುರನಾದ ವ್ಯಕ್ತಿ ತನ್ನ ಗುರಿಯ ಮೇಲೆ ಗಮನವನ್ನು ಹೇಗೆ ಕೇಂದ್ರೀಕರಿಸಬಲ್ಲ? ಆದರೂ ಅವನ ಗುರಿ ಕಾಮಕಲೆಗಳನ್ನು ಕೆತ್ತುವುದೇ ಆಗಿರುತ್ತದೆ? ಇದು ನನಗೊಂದು ಒಗಟಾಗಿತ್ತು. ದೇಶ ವಿದೇಶಗಳ ಪರ್ಯಟಕರು ಅಲ್ಲಿ ಸುತ್ತಾಡಿ ತಮ್ಮ ಕ್ಯಾಮೆರಾಗಳಲ್ಲಿ ಮಂದಿರಗಳೊಂದಿಗೆ ತಮ್ಮ ಫೋಟೊಗಳನ್ನು ಸಹ ಕ್ಲಿಕ್ಕಿಸಿಕೊಳ್ಳುತ್ತಿದ್ದರು. ನಾನೇಕೆ ಕ್ಯಾಮೆರಾ ತರಲಿಲ್ಲವೆಂದು ದುಃಖವಾಯಿತು. ಋಷಭ್ ಸಹ ಕ್ಯಾಮೆರಾ ತಂದಿರಲಿಲ್ಲ. ಅವರು ತಮ್ಮ ಮೊಬೈಲ್‌ನ ಕ್ಯಾಮೆರಾದಲ್ಲಿ ಚಿತ್ರಗಳನ್ನು ತೆಗೆದುಕೊಳ್ಳುತ್ತಿದ್ದರು. ನನಗೂ ನನ್ನ ಮೊಬೈಲ್ ನೆನಪಾಯಿತು. ನಾನು ಸಹ ಹತ್ತು ಹದಿನೈದು ಚಿತ್ರಗಳನ್ನು ತೆಗೆದುಕೊಂಡೆ. ಭಾರತದ ಒಂದು ಜೋಡಿ ಕೈಕೈ ಹಿಡಿದುಕೊಂಡು ವಿಗ್ರಹಗಳನ್ನು ವೀಕ್ಷಿಸುತ್ತಾ ಹೋಗುತ್ತಿದ್ದರು. ನಾನು ಅವರ ಮನಸ್ಸಿನಲ್ಲಿ ಏನಾಗುತ್ತಿರಬಹುದು ಎಂದು ಯೋಚಿಸಿದೆ. ಋಷಭ್ ನನ್ನ ಬಳಿಗೆ ಸರಿದು ಬಂದರು.

'ಅಲ್ನೋಡಿ... ಅಲ್ಲಿ... ಹಾಂ, ಆ ವಿಗ್ರಹ... ನಮ್ಮ ಪೂರ್ವಿಕರು ಕಡಿಮೆ ಇರಲಿಲ್ಲ' ಋಷಭ 'ಪಶು ಆಸನ'ದ ವಿಗ್ರಹದೆಡೆಗೆ ಸಂಜ್ಞೆ ಮಾಡುತ್ತಾ ಹೇಳಿದರು.

'ನೀವೇನು ಕಡಿಮೆ?' ನಾನು ಸಹ ಅದೇ ಮಟ್ಟದಲ್ಲಿ ಉತ್ತರಿಸಿದೆ. ರಿತಿಕ್ ಮತ್ತು ನನ್ನ ಮಧ್ಯೆ ಗಾಢ ಆತ್ಮೀಯತೆಯಿದ್ದರೂ ನಾನೆಂದೂ ರಿತಿಕ್‌ನೊಂದಿಗೆ ಹೀಗೆ ಮಾತನಾಡಿರಲಿಲ್ಲ. ಆ ವಿಗ್ರಹಗಳಲ್ಲಿ ತೋರಿಸಲಾದ ಕಾಮಕಲೆಗಳನ್ನು ನೋಡಿ, ಕಾಮವನ್ನು ಕಲೆ ಎಂದು ಏಕೆ ಹೇಳಲಾಗಿದೆ ಎಂಬುದು ನನಗೆ ಅರ್ಥವಾಗುತ್ತಿತ್ತು. ಯಾವುದೇ ಕಲೆಯಲ್ಲಿ ಸತತ ಅಭ್ಯಾಸದಿಂದಲೇ ನೈಪುಣ್ಯವನ್ನು ಗಳಿಸಲು ಸಾಧ್ಯ. ಕಾಮಕಲೆಯಲ್ಲಿಯೂ ನೈಪುಣ್ಯವನ್ನು ಪಡೆಯಲು ಈ ಜನ ಹೀಗೆ ಸತತ ಅಭ್ಯಾಸವನ್ನು ಮಾಡುತ್ತಿದ್ದರೇನೋ ಎಂದು ನಾನು ಯೋಚಿಸಿದೆ. ಮಂದಿರ ಪರಿಸರದ ಗೇಟ್ ಮುಚ್ಚುವ ಸಮಯಕ್ಕೆ ನಾವು ಹೊರ ಬಂದೆವು.

ಋಷಭ್ ಮಂದಿರ ಪರಿಸರದ ಹೊರಗೆ ಮಾರಲ್ಪಡುವ ಕಾರ್ಡ್ಸ್ ಮತ್ತು ಚಿತ್ರಗಳ ಚಿಕ್ಕ ಪುಸ್ತಕಗಳನ್ನು ಕೊಂಡರು. ಒಂದೆರಡು ಸಿಡಿಗಳನ್ನು ಸಹ ಕೊಂಡರು. ನಾನು ನನಗಾಗಿ ಎಥ್ನಿಕ್ ಶೈಲಿಯ ಹಾರಗಳು ಮತ್ತು ಬ್ರೇಸ್ಲೆಟ್‌ಗಳನ್ನು ಕೊಂಡೆ. ಅಮ್ಮನಿಗೆ ಕುರ್ತಾ ಖರೀದಿಸಿದೆ. ಈ ಖರೀದಿಯಲ್ಲಿ ನಾನು ಮೋಸ ಹೋಗಿರಬಹುದು, ಆದರೆ ನಾನು ಖಜುರಾಹೋಗೆ ಭೇಟಿ ನೀಡಿದ್ದೇನೆ ಎಂಬುದನ್ನು ಸಾರ್ವಜನಿಕವಾಗಿ ಎಲ್ಲರೆದುರು ಪ್ರದರ್ಶಿಸಲು ಕೆಲವು ಸ್ಮೃತಿಚಿಹ್ನೆಗಳನ್ನು ಕೊಳ್ಳಬೇಕಿತ್ತು. ಅಲ್ಲೆಲ್ಲಾ ಸಂಚರಿಸಿ ರಾತ್ರಿ ಹೊಟೇಲ್‌ಗೆ ಬಂದಾಗ ಋಷಭರು ಚಿತ್ರಗಳ ಬುಕ್‌ಲೆಟ್ ತೆರೆದು ಕೂತರು.

'ಇಲ್ಲಿ ಬನ್ನಿ, ಇವುಗಳನ್ನು ಒಟ್ಟಿಗೆ ಕೂತು ನೋಡೋಣ', ಋಷಭರು ನನ್ನನ್ನು ಬಳಿಗೆ ಕರೆದರು. ನನಗೆ ಅವರ ಈ ಆಹ್ವಾನ ಮಕ್ಕಳ ಆಟದಂತೆ ಕಂಡಿತು. ಆದರೂ ನಾನು ಅವರಿಗೆ ಬೇಸರವಾಗಬಾರದೆಂದು ಅವರ ಬಳಿಗೆ ಬಂದು ಕೂತು ಚಿತ್ರಗಳನ್ನು ನೋಡಲಾರಂಭಿಸಿದೆ.

'ಇಲ್ಲಿಯ ಎಲ್ಲಾ ವಿಗ್ರಹಗಳು ವಾತ್ಸಾಯನನ 'ಕಾಮಸೂತ್ರ'ವನ್ನು ಆಧರಿಸಿವೆ', ಅವರು ಚಿತ್ರಗಳನ್ನು ನೋಡುತ್ತಾ ತಮ್ಮ ಅಭಿಪ್ರಾಯವನ್ನು ಹೇಳಿದರು. ನಾನು ಮೌನಿಯಾಗಿ ನೋಡುತ್ತಿದ್ದೆ. ಆಗ ನನಗೆ ರಿತಿಕ್‌ನ ನೆನಪುಗಳು ಕಾಡುತ್ತಿದ್ದವು. ಒಂದು ವೇಳೆ ನಾನು ಅವನೊಂದಿಗೆ ಇಲ್ಲಿಗೆ ಬಂದಿದ್ದರೆ? ಒಂದು ವೇಳೆ ಅವನು ಈಗ ನನ್ನ ಬಳಿ ಇದ್ದಿದ್ದರೆ? ಅವನು ಇಷ್ಟು ಹೊತ್ತು ತಡೆದುಕೊಳ್ಳುತ್ತಿದ್ದನೇ? ಅವನು ಹೀಗೆ ಚಿತ್ರಗಳನ್ನು ನೋಡುತ್ತಾ ಸಮಯವನ್ನು ಕಳೆಯುತ್ತಿದ್ದನೆ?

'ಇವತ್ತು ಈ ಆಸನವನ್ನು ಪ್ರಯೋಗಿಸಿ ನೋಡೋಣ, ನಮ್ಮ ಪ್ರವಾಸ ಸದಾ ನೆನಪಿನಲ್ಲಿರುವುದು', ಋಷಭರು ಒಂದು ಚಿತ್ರವನ್ನು ತೋರಿಸುತ್ತಾ ಹೇಳಿದರು. ನನಗೆ ಅಡ್ಡಿ ಇರಲಿಲ್ಲ. ನಾನು ಈ ಮಾರ್ಗದಲ್ಲಿ ರಿತಿಕ್‌ನೊಂದಿಗೆ ಸಾಗಿ ಬಂದಿದ್ದೆ. ಮೊದಲ ದಿನ ಹಿಂದೂ ಮಂದಿರ ಪರಿಸರದಲ್ಲಿ ಸುತ್ತಾಡಿದ್ದೆವು, ಎರಡನೆಯ ದಿನ ಜೈನ ಮಂದಿರ ಸಮೂಹವನ್ನು ನೋಡಲು ಹೋದೆವು. ಆ ಮಂದಿರಗಳು ಸಹ ಅತಿ ಸುಂದರವಾಗಿದ್ದು, ಕಲಾತ್ಮಕವಾಗಿದ್ದವು. ನನಗೆ ಖಜುರಾಹೋಗೆ ಪದೇ ಪದೇ ಬರಬೇಕೆಂದು ಮನಸ್ಸಾಯಿತು. ಖಜುರಾಹೋದಿಂದ ಮರಳಿ ಬರುವಾಗ ನಾನು ಯಾವುದೋ ಭಾವನೆಗೆ ಒಳಗಾಗಿ ಋಷಭರಿಗೆ ರಿತಿಕ್ ಬಗ್ಗೆ ಹೇಳಿದೆ. ಇದಕ್ಕೂ ಮೊದಲು ಈ ಬಗ್ಗೆ ನಾನೇನೂ ಹೇಳಿರಲಿಲ್ಲ.

'ನೀವು ನಿಮ್ಮ ಬಗ್ಗೆ ಹೇಳಿದ್ದು ಒಳ್ಳೆಯದಾಯ್ತು. ಇನ್ನು ನನಗೆ ನಿಮ್ಮ ಬಗ್ಗೆ ಅಪರಾಧಪ್ರಜ್ಞೆ ಮೂಡುವುದಿಲ್ಲ', ಋಷಭ್ ನೆಮ್ಮದಿಯಿಂದ ಉಸಿರಾಡಿದ್ದರು.

'ಅಂದ್ರೆ?'

'ಅಂದ್ರೆ ನೀವು ಸ್ವತಂತ್ರವಾಗಿರಲು ಬಯಸುತ್ತೀರ... ನೀವು ನನ್ನ ಜಾಗದಲ್ಲಿ ಶೀಘ್ರವೇ ಬೇರೊಬ್ಬ ಪುರುಷನನ್ನು ಹುಡುಕಿಕೊಳ್ಳುತ್ತೀರ', ಋಷಭರಿಂದ ನಾನು ಈ ಮಾತನ್ನು ನಿರೀಕ್ಷಿಸಿರಲಿಲ್ಲ. ನನ್ನ ತಲೆ ಸುತ್ತಿದಂತಾಯಿತು.

'ನೀವು ನನ್ನನ್ನು ಕಾಲ್‌ಗರ್ಲ್ ಅಂತ ತಿಳಿದಿದ್ದೀರ?' ನಾನು ತುಂಬಾ ರೇಗಿದೆ.

'ಛೀಃ ನಾನು ಹೀಗೆಲ್ಲಿ ಹೇಳಿದೆ?' ಎಂದರು ಋಷಭ್.

